12. ಗುತ್ತಿಗೆ ವಹಿಸಿದ 15 ದಿನದ ಅವಧಿಯೊಳಗೆ ನಿಗದಿತ ಮೌಲ್ಯದ ಛಾಪಾ ಕಾಗದದಲ್ಲಿ ಕರಾರು ಪತ್ರವನ್ನು ಸಹಿ ಮಾಡಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಭಾರತದ ರಾಷ್ಟ್ರಪತಿಯವರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಎಸ್. ಮಂಜುನಾಥ್

ಪಿ.ಆರ್. 251

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ತಾಂತ್ರಿಕ ಶಿಕ್ಷಣ ಇಲಾಖೆ
ಪ್ರಾಚಾರ್ಯರವರ ಕಾರ್ಯಾಲಯ ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ
ಟೆಂಡರು ಪ್ರಕಟಣೆ
ನಂ:ವಿಸಪಾಭ/142/ರಿ/2004–05, ದಿನಾಂಕ: 23ನೇ ಏಪ್ರಿಲ್ 2008

ವಿಷಯ: ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿರುವ ತೆಂಗಿನ ಮರದ ಬಲಿತ ಕಾಯಿಗಳನ್ನು ಟೆಂಡರ್ ಮೂಲಕ ವಿಲೇವಾರಿ ಮಾಡುವ ಬಗ್ಗೆ ಪ್ರಕಟಣೆ.

ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಆವರಣದಲ್ಲಿರುವ 50 ತೆಂಗಿನ ಮರಗಳಿಂದ ಬಲಿತ ತೆಂಗಿನ ಕಾಯಿಗಳನ್ನು ಕೊಯ್ದು ಕೊಳ್ಳಲು ಮತ್ತು ತೆಂಗಿನ ಗರಿ ಇತ್ಯಾದಿಗಳನ್ನು ಒಯ್ಯಲು ಎರಡು ವರ್ಷಗಳವರೆಗೆ ಪಡೆಯಲು ಮೊಹರಾದ ಟೆಂಡರ್ ದರವನ್ನು ದಿನಾಂಕ 10.06.2008 ರ ಒಳಗೆ ಮಧ್ಯಾಹ್ನ 4.00 ಗಂಟೆಯ ಒಳಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಸಲ್ಲಿಸಲು ತಿಳಿಸಲಾಗಿದೆ.

1) ಟೆಂಡರ್‌ನಲ್ಲಿ ಭಾಗವಹಿಸುವವರು ರೂ. 500–00 ಪ್ರಾರಂಭಿಕ ಠೇವಣಿ ಹಣ ನೀಡಬೇಕು. ಈ ಹಣ ಟೆಂಡರ್ ಮುಗಿದ ನಂತರ ಹಿಂದಿರುಗಿಸಲಾಗುವುದು.
2) ಟೆಂಡರ್ ಮೊತ್ತ ನಿಗದಿತ ಮೊತ್ತಕ್ಕಿಂತ ಕಡಿಮೆ ಆದಲ್ಲಿ ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಧಿಕಾರ ಪ್ರಾಚಾರ್ಯರವರಿಗೆ ಇರುತ್ತದೆ.
3) ಎರಡು ವರ್ಷದ ಗುತ್ತಿಗೆಗೂ ಒಟ್ಟು ಮೊತ್ತವನ್ನು ಟೆಂಡರ್ ತೆರೆದ 3 ದಿನಗಳಲ್ಲಿ ಕಟ್ಟಬೇಕು. ಇಲ್ಲದಿದ್ದಲ್ಲಿ ಟೆಂಡರ್ ರದ್ದಾಗುತ್ತದೆ. ಅದನ್ನು ಪ್ರಾಚಾರ್ಯರು ಸೂಕ್ತ ರೀತಿ ಮುಂದಿನ ಕ್ರಮ ಕೈಗೊಳ್ಳುವರು. ಹಾಗೂ ಪ್ರಾರಂಭಿಕ ಠೇವಣಿ ಮುಟ್ಟುಗೋಲು ಹಾಕಲಾಗುವುದು.
4) ವಿಜೇತ ಟೆಂಡರ್‌ದಾರರು ಅವಧಿ ಆದೇಶ ನೀಡಿದ ದಿನಾಂಕದಿಂದ 2 ವರ್ಷ ಚಾಲ್ತಿಯಲ್ಲಿರುತ್ತದೆ. ಈ ಅವಧಿಯಲ್ಲಿ ಎಳೆನೀರು ಕೀಳಲು ಅವಕಾಶವಿಲ್ಲ. ತೆಂಗಿನ ಗಿಡಗಳಿಗೆ ಉತ್ತಮ ಫಸಲು ನೀಡಲು ಗೊಬ್ಬರ, ಪಾತಿ ಮಾಡುವುದು, ನೀರು ಹಾಕುವುದು ಅವರದೇ ಜವಾಬ್ದಾರಿಯಾಗಿರುತ್ತದೆ.
5) ತೆಂಗಿನ ಗಿಡಗಳ ಕಾಯಿ ಕೀಳದಂತೆ ನೋಡಿಕೊಳ್ಳುವ ಉಸ್ತುವಾರಿ ಯಶಸ್ವಿ ಹರಾಜುದಾರರದ್ದೇ ಆಗಿರುತ್ತದೆ.
6) ತೆಂಗಿನ ಗಿಡಗಳಿಗೆ ನೀರು, ಗೊಬ್ಬರ ಮತ್ತು ಇತ್ಯಾದಿ ಕಾಲ ಕಾಲಕ್ಕೆ ಹಾಕತಕ್ಕದ್ದು.
7) ಯಾವುದೇ ವಿವಾದಾತ್ಮಕ ಅಂಶಗಳಿಗೆ ಪ್ರಾಚಾರ್ಯರ ತೀರ್ಮಾನವೇ ಅಂತಿಮ.

ಪ್ರಾಚಾರ್ಯರು
ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್
ಭದ್ರಾವತಿ–577 301

ಪಿ.ಆರ್. 254

ತಾಂತ್ರಿಕ ಶಿಕ್ಷಣ ಇಲಾಖೆ
ಪ್ರಾಚಾರ್ಯರವರ ಕಾರ್ಯಾಲಯ ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್ ಭದ್ರಾವತಿ
ಟೆಂಡರು ಪ್ರಕಟಣೆ
ನಂ:ವಿಸಪಾಭ/35/ರಿ/ಕ್ಯಾಂಟೀನ್/2001–02, ದಿನಾಂಕ: 23ನೇ ಏಪ್ರಿಲ್ 2008

ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿಯ ಆಡಳಿತ ಕಟ್ಟಡದ ಮುಂಭಾಗದಲ್ಲಿ ರಸ್ತೆಗೆ ಹೊಂದಿಕೊಂಡಿರುವ ಕ್ಯಾಂಟೀನ್ (12 x 15) ಕಟ್ಟಡವನ್ನು 02 ವರ್ಷದ ಅವಧಿಗೆ ಅತೀ ಹೆಚ್ಚು ಬಾಡಿಗೆ ಆಧಾರದ ಕ್ಯಾಂಟೀನ್ ನಡೆಸಲು ಬಯಸುವವರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರುದಾರರು ದಿನಾಂಕ 10.06.2008 ಅಪರಾಹ್ನ 3.00 ಗಂಟೆಯ ಒಳಗೆ ತಿಂಗಳ ಬಾಡಿಗೆ ಅಂತೆ ಹಾಗೂ ಅಕ್ಷರಗಳಲ್ಲಿ ನಮೂದಿಸಿ ಸಹಿಯೊಂದಿಗೆ ಪ್ರಾಚಾರ್ಯರು, ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ ಇವರಿಗೆ ಸಲ್ಲಿಸತಕ್ಕದ್ದು.

1) ಕ್ಯಾಂಟೀನ್ ನಡೆಸಲು ಟೆಂಡರ್ ಅಂಗೀಕರಿಸಿದ ಆದೇಶ ನೀಡಿದ ದಿನಾಂಕದಿಂದ 02 ವರ್ಷಗಳವರೆಗೆ ಕಾಲಾವಕಾಶವಿರುತ್ತದೆ.
2) ಅಂಗೀಕರಿಸಲ್ಪಟ್ಟ ಟೆಂಡರ್‌ದಾರರು ಆದೇಶ ಪಡೆದ ತಕ್ಷಣ ರೂ. 5000–00 ಠೇವಣಿ ಕಟ್ಟಿ ಕ್ಯಾಂಟೀನ್ ಸ್ವಾಧೀನ ಪಡೆಯತಕ್ಕದ್ದು.
3) ಕ್ಯಾಂಟೀನ್ ಒಳ ಹಾಗೂ ಹೊರ ಆವರಣ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು.
4) ಪ್ರತಿ ತಿಂಗಳ ಮುಂದಿನ 10 ದಿನಗಳಲ್ಲಿ ಬಾಡಿಗೆ ನಗದು ವಿಭಾಗಕ್ಕೆ ಪಾವತಿಸಿ ರಶೀದಿ ಪಡೆಯತಕ್ಕದ್ದು.
5) ಟೆಂಡರ್‌ದಾರ ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
6) ಪ್ರತಿ ತಿಂಗಳು ವಿದ್ಯುತ್ ಬಿಲ್ ಪ್ರತ್ಯೇಕವಾಗಿ ಪಾವತಿಸಬೇಕಾಗಿರುತ್ತದೆ.
7) ಮೇಲ್ಕಂಡ ಕ್ರಮ ಸಂಖ್ಯೆ 01 ರಿಂದ 05 ರ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಕ್ಯಾಂಟೀನ್ ಟೆಂಡರ್ ರದ್ದು ಪಡಿಸಲು ಅಧಿಕಾರವಿರುತ್ತದೆ.

ಪ್ರಾಚಾರ್ಯರು
ವಿ ಐ ಎಸ್ ಎಸ್ ಜೆ ಸರ್ಕಾರಿ ಪಾಲಿಟೆಕ್ನಿಕ್
ಭದ್ರಾವತಿ–577 301

ಪಿ.ಆರ್. 255

ಜಿಲ್ಲಾ ಪೊಲೀಸ್ ಕಛೇರಿ, ಹಾಸನ ಜಿಲ್ಲೆ, ಹಾಸನ

ಅಧಿಸೂಚನೆ

ಸಂಖ್ಯೆ:ಪಿಎಂಟಿ:110/02–03, ದಿನಾಂಕ: 11ನೇ ಏಪ್ರಿಲ್ 2008

ವಿಷಯ: ಹಾಸನ ಜಿಲ್ಲಾ ಪೊಲೀಸ್ ಇಲಾಖೆಯ ಅನುಪಯುಕ್ತ ಪೊಲೀಸ್ ವಾಹನಗಳನ್ನು ಮರು ಟೆಂಡರ್ ಮೂಲಕ ಸಾರ್ವಜನಿಕ ಮರು ಹರಾಜು ಮಾಡಿ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ: 1) ಪೊಲೀಸ್ ಪ್ರಧಾನ ಕಛೇರಿಯ ಆದೇಶ ಸಂಖ್ಯೆ. ವಾ.ಸಾ(1) 26/06–07 (ವಾಲ್ಯೂಂ) 2) ದಿನಾಂಕ 01.03.2007.

2) ವಾಸಾ (1)11/06–07 ದಿನಾಂಕ: 28.12.2007.

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ, ದಿನಾಂಕ: 30.05.08 ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಕೇಂದ್ರಸ್ಥಾನ ಹೊಸಲೈನ್ ರಸ್ತೆ ಹಾಸನದಲ್ಲಿ, ಹಾಸನ ಜಿಲ್ಲಾ ಪೊಲೀಸ್ ಇಲಾಖೆಯ ಕೆಳಕಂಡ ಅನುಪಯುಕ್ತ ವಾಹನಗಳ ಟೆಂಡರ್ ಕಂ., ಬಹಿರಂಗ ಹರಾಜು ಮೂಲಕ ವಿಲೇವಾರಿಗೊಳಿಸಲಾಗುವುದು. ಸದರಿ ಅನುಪಯುಕ್ತ ವಾಹನಗಳನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಕೇಂದ್ರಸ್ಥಾನ ಹೊಸಲೈನ್‌ರಸ್ತೆಯಲ್ಲಿ ಹಾಸನದ ಕಛೇರಿಯ ವೇಳೆಯಲ್ಲಿ ನೋಡಲು ಅವಕಾಶವಿರುತ್ತದೆ. ಸದರಿ ಅನುಪಯುಕ್ತ ವಾಹನಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

ಕ್ರ. ಸಂ.	ವಾಹನ ಮಾದರಿ ಮತ್ತು ಸಂಖ್ಯೆ	ನಮೂನೆ
1.	ಬುಲೆಟ್ ಮೋಟಾರ್ ಸೈಕಲ್ ಸಿಎಜಿ 5612	1981
2.	ಬುಲೆಟ್ ಮೋಟಾರ್ ಸೈಕಲ್ 5614	1981

ಹರಾಜಿನ ಷರತ್ತುಗಳು ಮತ್ತು ನಿಬಂಧನೆಗಳು

1) ಸದರಿ ಅನುಪಯುಕ್ತ ವಾಹನಗಳನ್ನು ಜಿಲ್ಲಾ ಸಶಸ್ತ್ರ ಮೀಸಲು ಪಡೆ ಹೊಸಲೈನ್ ರಸ್ತೆ ಹಾಸನದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. ಅವುಗಳು ಹಾಲಿ ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.

2) ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಪ್ರತಿಯೊಬ್ಬರು ಪ್ರತಿ ವಾಹನ ಒಂದಕ್ಕೆ ರೂ.3,000–00 ಠೇವಣಿಯನ್ನು ಹರಾಜಿಗೆ ಮುನ್ನ ನಗದಾಗಿ ಪಾವತಿಸತಕ್ಕದ್ದು. ಠೇವಣಿ ಪಾವತಿಸದೆ ಹರಾಜಿನಲ್ಲಿ ಭಾಗವಹಿಸುವಂತಿಲ್ಲ.

3) ಟೆಂಡರುಗಳನ್ನು ಸಲ್ಲಿಸಬಯಸುವ ಸಾರ್ವಜನಿಕರು ಮೊಹರು ಮಾಡಿದ ಲಕೋಟೆಯ ಮೇಲ್ಭಾಗದಲ್ಲಿ **"ನಿರುಪಯುಕ್ತ ವಾಹನಗಳಿಗಾಗಿ"** ಎಂದು ಬರೆದು ಅದರಡಿಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್, ಹಾಸನ ಜಿಲ್ಲೆ, ಹಾಸನ ಎಂದು ನಮೂದಿಸಿ ಈ ವಿಳಾಸಕ್ಕೆ ಖುದ್ದಾಗಿ ಇಲ್ಲವೇ ಅಂಚೆ ಮೂಲಕ ದಿನಾಂಕ 29.05.2008 ರಂದು ಸಂಜೆ 4.00 ಗಂಟೆ ಒಳಗಾಗಿ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ನಂತರ ಬಂದ ಟೆಂಡರುಗಳನ್ನು ಪರಿಗಣಿಸಲಾಗುವುದಿಲ್ಲ.

4) ಪ್ರತಿಯೊಬ್ಬ ಟೆಂಡರುದಾರರು ಪ್ರತಿ ವಾಹನಕ್ಕೆ ರೂ. 3,000–00 (ಮೂರು ಸಾವಿರ) ರೂಪಾಯಿಗಳನ್ನು ಪೊಲೀಸ್ ಸೂಪರಿಂಟೆಂಡೆಂಟ್, ಹಾಸನ ಜಿಲ್ಲೆ, ಇವರ ಹೆಸರಿನಲ್ಲಿ ತೆಗೆಸಿದ ಡಿ.ಡಿ.ಯನ್ನು ಟೆಂಡರ್ ಜೊತೆ ಲಗತ್ತಿಸಬೇಕು. ಡಿ.ಡಿ. ಯನ್ನು ಕ್ರಾಸ್ ಮಾಡಬಾರದು. ಹಾಗೆ ಮಾಡಿದಲ್ಲಿ ಅದನ್ನು ಅನರ್ಹವೆಂದು ಪರಿಗಣಿಸಲಾಗುವುದು.

5) ಯಾವುದೇ ಠೇವಣಿ ಹಣಕ್ಕೆ ಬಡ್ಡಿ ಕೊಡಲಾಗುವುದಿಲ್ಲ. ಹಾಗೂ ಟೆಂಡರ್ ಫಾರಂಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.

6) ಟೆಂಡರ್ ಫಾರಂನಲ್ಲಿ ಹೆಚ್ಚಿನ ಮೊತ್ತವನ್ನು ಅಂಕಿ ಮತ್ತು ಅಕ್ಷರಗಳೆರಡರಲ್ಲಿಯೂ ಸ್ಪಷ್ಟವಾಗಿ ನಮೂದಿಸಿರಬೇಕು. ಏನಾದರೂ ತಿದ್ದುಪಡಿ ಮಾಡಿದ್ದಲ್ಲಿ ಟೆಂಡರ್‌ದಾರರು ತಮ್ಮ ಪೂರ್ಣ ಸಹಿ ಮಾಡಿ ತಿದ್ದುಪಡಿಯನ್ನು ದೃಢೀಕರಿಸಿರಬೇಕು.

7) ಈ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆ ದಾಖಲುಗೊಳಿಸಿದ ನಂತರ ಸ್ವೀಕೃತವಾದ ಟೆಂಡರ್ ಲಕೋಟೆಗಳನ್ನು ಪೊಲೀಸ್ ಸೂಪರಿಂಟೆಂಡೆಂಟ್, ಹಾಸನ ಜಿಲ್ಲೆ, ಅವರಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳಾಗಲೀ ಸಾರ್ವಜನಿಕರ ಸಮ್ಮುಖದಲ್ಲಿ ಬಹಿರಂಗಪಡಿಸುವರು. ಹರಾಜಿನಲ್ಲಿ ದಾಖಲಾದ ಹೆಚ್ಚಿನ ಬಿಡ್ ಬೆಲೆ ಅಥವಾ ಟೆಂಡರಿನಲ್ಲಿ ದಾಖಲಿಸಿದ ಹೆಚ್ಚಿನ ಬೆಲೆ ಇವೆರಡರಲ್ಲಿ ಅತೀ ಹೆಚ್ಚಿನ ದರ ದಾಖಲಿಸಿದವರನ್ನು ಯಶಸ್ವಿ ಟೆಂಡರ್:ಬಿಡ್‌ದಾರರೆಂದು ಪರಿಗಣಿಸಲಾಗುವುದು.

8) ಯಶಸ್ವಿಯಾದವರ ಅಂಗೀಕೃತ ಹೆಚ್ಚಿನ ಬೆಲೆಯಲ್ಲಿ ಶೇಕಡ 25 ರಷ್ಟು ಹಣವನ್ನು ಅವರು ಹರಾಜಿನ ಸ್ಥಳದಲ್ಲಿ ಹರಾಜಿನ ದಿನವೇ ತುಂಬತಕ್ಕದ್ದು. ಈ ಹಣಕ್ಕೂ ಯಾವುದೇ ಬಡ್ಡಿ ನೀಡಲಾಗುವುದಿಲ್ಲ. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರಿಂದ ವಿಲೇವಾರಿಗೆ ಒಪ್ಪಿಗೆ ಬಂದ ನಂತರ ಉಳಿದ ಹಣವನ್ನು ಹಾಗೂ ಮಾರಾಟ ತೆರಿಗೆ ಇತ್ಯಾದಿಯನ್ನು ಕಟ್ಟಿಸಿಕೊಳ್ಳಲಾಗುವುದು. ಹಾಗೂ ಪ್ರಾದೇಶಿಕ ಶುಲ್ಕ ವಗೈರೆ ಅವರ ಸ್ವತಃ ಹಣದಿಂದ ಭರಿಸಿ ಮಾಲೀಕತ್ವ ಬದಲಾವಣೆ ಮಾಡಿಕೊಂಡ ಬಗ್ಗೆ ದಾಖಲಾತಿಗಳನ್ನು ಒದಗಿಸಿದ ನಂತರ ಇಲ್ಲವೇ ವಾಹನ ಉಪಯೋಗಿಸದೇ ಕುಟ್ಟು ಗುಜರಿಗೆ

ಹಾಕಲಾಗುವುದೆಂದು ಬರೆದುಕೊಟ್ಟ ಮೇಲೆ ಅವರ ಸ್ವಂತ ಖರ್ಚಿನಲ್ಲಿ ಸಾಗಿಸಿಕೊಳ್ಳಲು ವಾಹನಗಳನ್ನು ಯಶಸ್ವಿದಾರರ ವಶಕ್ಕೆ ವಹಿಸಿಕೊಡಲಾಗುವುದು.

9) ಎಲ್ಲಾ ಹಣವನ್ನು ಪೊಲೀಸ್ ಸೂಪರಿಂಟೆಂಡೆಂಟ್, ಹಾಸನ ಜಿಲ್ಲೆ, ಹಾಸನ ಇವರ ಕಛೇರಿಯ ನಗದು ಶಾಖೆಯಲ್ಲಿ ನಗದಾಗಿಯೇ ತುಂಬಬೇಕು. ಚೆಕ್ ಅಥವಾ ಡಿಡಿ ಮೂಲಕ ಹಣ ಸ್ವೀಕರಿಸುವುದಿಲ್ಲ.

10) ಅನುಪಯುಕ್ತ ವಾಹನಗಳಿಗೆ ಮಾರಾಟ ತೆರಿಗೆಯನ್ನು ಯಶಸ್ವಿ ಬಿಡ್‌ದಾರರಿಂದ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ವಿಧಿಸಿ ವಸೂಲು ಮಾಡಲಾಗುವುದು.

11) ಹರಾಜು ಮುಗಿದ ನಂತರ ಯಶಸ್ವಿಯಾಗದ ಟೆಂಡರು:ಬಿಡ್‌ದಾರರ ಠೇವಣಿ ಹಣವನ್ನು ಕೂಡಲೇ ಹಿಂತಿರುಗಿಸಲಾಗುವುದು. ಸಾರ್ವಜನಿಕರು ಇಲಾಖಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

12) ಯಶಸ್ವಿಯಾದ ಟೆಂಡರ್:ಬಿಡ್‌ದಾರರು ತಮ್ಮ ತಪ್ಪು ಗ್ರಹಿಕೆಯಿಂದ ಇಲಾಖೆಗೆ ನಷ್ಟವಾಗುವಂತಹ ಸಂದರ್ಭ ಉದ್ಭವಿಸಿದಲ್ಲಿ ಅಂತಹವರು ಮುಂಗಡವಾಗಿ ಪಾವತಿಸಿರುವ ಹಣದಲ್ಲಿ ನಷ್ಟವನ್ನು ಮಾಡಿಕೊಳ್ಳುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ. ಈ ರೀತಿ ವಸೂಲಿ ಮಾಡಲು ತೀರ್ಮಾನಿಸಿದ ಹಣವನ್ನು ಸ್ಥಳದಲ್ಲಿಯೇ ಪಾವತಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಪಟ್ಟವರ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲಾಗುವುದು.

13) ಈ ಹರಾಜಿನ ವಿಷಯದಲ್ಲಿ ಯಾವುದೇ ಕಾರಣಕ್ಕಾಗಿ ರದ್ದು ಮಾಡುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ಇವರು ಹೊಂದಿರುತ್ತಾರೆ. ಮತ್ತು ಇವರ ತೀರ್ಮಾನವೇ ಅಂತಿಮವಾದದ್ದು.

14) ಮೇಲೆ ತಿಳಿಸಿರುವ ಹರಾಜಿನ ವಿಷಯದಲ್ಲಿ ಯಾವುದೇ ವಾದ–ವಿವಾದ ಉಂಟಾದಲ್ಲಿ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ಇವರು ಮಾಡುವ ನಿರ್ಣಯವೇ ಅಂತಿಮವಾಗಿರುತ್ತದೆ.

15) ಹರಾಜಿನಲ್ಲಿ ಭಾಗವಹಿಸುವ ಎಲ್ಲಾ ಬಿಡ್‌ದಾರರು ತಮ್ಮ ಪರಿಪೂರ್ಣ ವಿಳಾಸವನ್ನು ಬರೆದಿರುವ ಚೀಟಿಯೊಂದಿಗೆ ಠೇವಣಿ ಹಣವನ್ನು ಪಾವತಿ ಮಾಡಿ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು.

16) ಟೆಂಡರ್ ಫಾರಂಗಳಲ್ಲಿ ಟೆಂಡರುದಾರರು ತಮ್ಮ ಸಂಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಿರಬೇಕು. ಟೆಂಡರ್ ಫಾರಂ ನಮೂನೆಯನ್ನು ಈ ಕೆಳಗೆ ಕೊಡಲಾಗಿದೆ.

ಟೆಂಡರ್ ಫಾರಂ ನಮೂನೆ

ಅನುಪಯುಕ್ತ ಪೊಲೀಸ್ ವಾಹನಗಳಿಗಾಗಿ ಟೆಂಡರು

ಗೆ,

ಪೊಲೀಸ್ ಸೂಪರಿಂಟೆಂಡೆಂಟ್ ರವರು,
ಹಾಸನ ಜಿಲ್ಲೆ, ಹಾಸನ.

ಮಾನ್ಯರೇ,

ತಮ್ಮ ಕಛೇರಿಯ ಅಧಿಸೂಚನೆ ಸಂಖ್ಯೆ:ಪಿಎಂಟಿ:110:02–2005 ದಿನಾಂಕ––––––––––ರಲ್ಲಿ ತಿಳಿಸಿರುವ–––––––– ಸಂಖ್ಯೆ ವಾಹನವನ್ನು ರೂ. ––––––––– (ರೂಪಾಯಿ –––––––––) ಗಳಿಗೆ ಖರೀದಿಸಲು ಇಚ್ಛಿಸಿರುತ್ತೇನೆ.

ತಮ್ಮ ವಿಶ್ವಾಸಿ
(ಬಿಡ್‌ದಾರರ ಪೂರ್ಣ ಸಹಿ ಮತ್ತು ವಿಳಾಸ)

ಪಿ.ಆರ್. 247

ಸೂಪರಿಂಟೆಂಡೆಂಟ್ ಆಫ್ ಪೊಲೀಸ್,
ಹಾಸನ ಜಿಲ್ಲೆ, ಹಾಸನ

ಜಲಸಂಪನ್ಮೂಲ ಇಲಾಖೆ – ಸಣ್ಣ ನೀರಾವರಿ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

ಸಂಖ್ಯೆ: ಸನೀವಿ/ಬೆಂ/ಪಿಬಿ–11/ರಾಮನಗರ/ಏ.ನೀ.ಯೋ/ಟೆಂಡರ್/2008–09/970, ದಿನಾಂಕ: 15ನೇ ಏಪ್ರಿಲ್ 2008

ಟೆಂಡರ್ ಪ್ರಕಟಣೆ ಸಂಖ್ಯೆ:1/2008–09, ದಿ:05ನೇ ಏಪ್ರಿಲ್ 2008

(ಎರಡು ಲಕೋಟೆ ಪದ್ಧತಿ)

ಐದನೇ ಕರೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಾರದರ್ಶಕ ಅಧಿನಿಯಮ 1999 ಮತ್ತು 2000ರಂತೆ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಮೊದಲನೆ ದರ್ಜೆ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಂದ ಎರಡು ಲಕೋಟೆ ಅಂದರೆ ತಾಂತ್ರಿಕ ಮತ್ತು ಆರ್ಥಿಕ ಬಿಡ್ ಪದ್ಧತಿಯಲ್ಲಿ ಐಟಂ ರೇಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗೆ ತೋರಿಸಿದ ನಮೂನೆಯಲ್ಲಿ ಇರುತ್ತದೆ.

ಗುತ್ತಿಗೆದಾರರು ಅಂದರೆ ವೈಯಕ್ತಿಕ/ಫರ್ಮ್/ಸಂಯುಕ್ತವಾಗಿ ಎರಡು ಅಥವಾ ಹೆಚ್ಚಿನ ಗುತ್ತಿಗೆದಾರರು/ಫರ್ಮ್ ಅಥವಾ ಎರಡು ಹೊಂದಿರುವ ಪ್ರಮುಖ ಪಾಲುದಾರರು. ಖಾಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ ದಸ್ತಾವೇಜುಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಛೇರಿ ಯಿಂದ ಕಛೇರಿ ಕೆಲಸದ

ವೇಳೆಯಲ್ಲಿ ಲಿಖಿತ ಅರ್ಜಿ ಮೂಲಕ ನಿಗದಿ ಪಡಿಸಿದ ಮೊತ್ತವನ್ನು ಪಾವತಿಸುವ ಮೂಲಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಂದ ಪಡೆಯಬಹುದು ಮತ್ತು ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಇ.ಎಂ.ಡಿ.ಯನ್ನು ತಾಂತ್ರಿಕ ಬಿಡ್‌ನೊಂದಿಗೆ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರಿಗೆ ಸಲ್ಲಿಸಬಹುದು. ಗುತ್ತಿಗೆ ಪಡೆಯುವಲ್ಲಿ ಯಶಸ್ವಿಯಾಗದ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಟೆಂಡರ್ ತೆರೆದ 90 ದಿನಗಳ ನಂತರ ಹಿಂತಿರುಗಿಸಲಾಗುವುದು.

ಕಾಮಗಾರಿಯ ವಿವರಗಳು

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ. ಗಳಲ್ಲಿ)	ಖಾಲಿ ಟೆಂಡರ್ ಫಾರ್ಮಿನ ಬೆಲೆ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ದ್ವಿಪ್ರತಿಗಳು) ತೆರಿಗೆ ಪ್ರತ್ಯೇಕ (ಹಿಂದಿರುಗಿಸ ಲಾಗದು) (ರೂ.ಗಳಲ್ಲಿ)	ಗುತ್ತಿಗೆ ದಾರರ ದರ್ಜೆ	ಕಾಮಗಾರಿ ಯನ್ನು ಪೂರ್ಣ ಗೊಳಿಸ ಬೇಕಾದ ಅವಧಿ ಮಳೆಗಾಲ ಹೊರತು ಪಡಿಸಿ
1	ರಾಮನಗರ ಜಿಲ್ಲೆ, ರಾಮನಗರ ತಾ:ಹುಚ್ಚಮ್ಮನದೊಡ್ಡಿ ಏತ ನೀರಾವರಿ ಯೋಜನೆ ಪುನರುಜ್ಜೀವನ ಕಾಮಗಾರಿ	125.00	1,25000	10000 + ವ್ಯಾಟ್ @ 12.5%	1ನೇ ದರ್ಜೆ ಸಿವಿಲ್	9 ತಿಂಗಳು

ಎರಡು ಲಕೋಟೆ ಟೆಂಡರ್ ಸಲ್ಲಿಸುವಲ್ಲಿ ತಾಂತ್ರಿಕ ಬಿಡ್ ಭಾಗ – 1 ಮತ್ತು ಆರ್ಥಿಕ ಬಿಡ್ ಭಾಗ – 2 ಎಂಬ ಪದ್ಧತಿಯನ್ನು ಅನುಸರಿಸುವುದು. ತಾಂತ್ರಿಕ ಬಿಡ್ಡಿನ ಮೌಲ್ಯ ಮಾಪನವನ್ನು ಅರ್ಜಿದಾರರು ಸಲ್ಲಿಸಿರುವ ವಿವರಗಳ ಆಧಾರದ ಮೇಲೆ ಮಾಡಲಾಗುವುದು.

ಗುತ್ತಿಗೆದಾರರು ಖಾಲಿ ಟೆಂಡರ್ ದಸ್ತಾವೇಜುಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಛೇರಿಯಿಂದ ದಸ್ತಾವೇಜುಗಳಿಗೆ ನಿಗದಿಪಡಿಸಿದ ಮೊತ್ತವನ್ನು ಡಿ.ಡಿ. ಮುಖಾಂತರ (ಹಿಂದಿರುಗಿಸಲಾಗುವುದಿಲ್ಲ) ಪಾವತಿಸಿ ದಸ್ತಾವೇಜುಗಳನ್ನು ಪಡೆಯಬಹುದು.

ಹಣ ಪಾವತಿಸುವ ವಿಧಾನ:

ಡಿ.ಡಿ. ಅಥವಾ ಬ್ಯಾಂಕ್ ಚೆಕ್‌ನ್ನು ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಹೆಸರಿಗೆ ಪಡೆದು ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಶೆಡ್ಯೂಲ್ಡ್ ಬ್ಯಾಂಕಿನಿಂದ ನಗದೀಕರಿಸುವಂತಿರತಕ್ಕದ್ದು.

1) ಖಾಲಿ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ:15.05.2008 ಸಂಜೆ 5.00 ರವರೆಗೆ
2) ಖಾಲಿ ಟೆಂಡರ್ ದಸ್ತಾವೇಜುಗಳನ್ನು ನೀಡುವ ಕೊನೆಯ ದಿನಾಂಕ: 20.05.2008 ಸಂಜೆ 5.00 ಗಂಟೆವರೆಗೆ
3) ಭರ್ತಿ ಮಾಡಿದ ಮೊಹರಬಂದ ಟೆಂಡರ್ ದಸ್ತಾವೇಜಗಳನ್ನು ಸ್ವೀಕರಿಸುವ ಕೊನೆಯ ದಿ:23.05.2008 ಸಂಜೆ 4.00 ಗಂಟೆವರೆಗೆ
4) ಭರ್ತಿ ಮಾಡಲಾದ ಟೆಂಡರ್ ಗಳನ್ನು ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ನಿಗದಿ ಪಡಿಸಿದ ದಿನಾಂಕ ಮತ್ತು ವೇಳೆಗಳಲ್ಲಿ ಸ್ವೀಕರಿಸಲಾಗುವುದು.
5) ಇ.ಎಂ.ಡಿ.ಯನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ಅಥವಾ ಬ್ಯಾಂಕ್ ಚೆಕ್‌ನ್ನು ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಹೆಸರಿಗೆ ಪಡೆದಿರಬೇಕು. ಮಾನ್ಯತೆ ಹೊಂದಿರದ ಇ.ಎಂ.ಡಿ.ಯನ್ನು ಟೆಂಡರ್‌ನೊಂದಿಗೆ ಲಗತ್ತಿಸಿ ಸಲ್ಲಿಸಿದ್ದಲ್ಲಿ ಅಂತಹ ಟೆಂಡರ್‌ಗಳನ್ನು ರದ್ದುಗೊಳಿಸಲಾಗುವುದು. ಈ ಇ.ಎಂ.ಡಿ.ಯನ್ನು ಟೆಂಡರ್ ತೆರೆದ ದಿನಾಂಕದಿಂದ 90 (ತೊಂಭತ್ತು) ದಿವಸದ ಅವಧಿಗೆ ಮಾನ್ಯತೆ ಹೊಂದಿರಬೇಕು.
6) ಈ ಕೆಳಕಂಡ ದೃಢೀಕರಿಸಿದ ಪ್ರಮಾಣ ಪತ್ರಗಳನ್ನು ತಾಂತ್ರಿಕ ಬಿಡ್ಡಿನ ಜೊತೆಯಲ್ಲಿ ಲಗತ್ತಿಸಿರಬೇಕು.
   ಅ) ಕೆ.ಪಿ.ಡಬ್ಲ್ಯೂ.ಡಿ. ಕರ್ನಾಟಕ ರಾಜ್ಯದ ಗುತ್ತಿಗೆದಾರರ ನೋಂದಣಿ ಪ್ರಮಾಣ ಪತ್ರ
   ಆ) ಇತ್ತೀಚಿನ ಇನ್‌ಕಂ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ
   ಇ) ಕರ್ನಾಟಕ ರಾಜ್ಯದ ಇತ್ತೀಚಿನ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ.

ಈ ಮೇಲಿನ ಎಲ್ಲಾ ಮೂಲ ಪ್ರಮಾಣ ಪತ್ರಗಳನ್ನು ದಿನಾಂಕ 15.05.2008 ಅಥವಾ ಮುಂಚಿತವಾಗಿ ಕಛೇರಿ ವೇಳೆಯಲ್ಲಿ ಪರಿಶೀಲನೆಗಾಗಿ ಒದಗಿಸುವುದು. ಒದಗಿಸದಿದ್ದಲ್ಲಿ ಅಂತಹ ಗುತ್ತಿಗೆದಾರರಿಗೆ ಟೆಂಡರ್ ಪುಸ್ತಕಗಳನ್ನು ನೀಡಲಾಗುವುದಿಲ್ಲ.

7) ತಾಂತ್ರಿಕ ಬಿಡ್‌ಗಳನ್ನು ಈ ಕೆಳಗೆ ಸಹಿ ಮಾಡಿರುವ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಛೇರಿಯಲ್ಲಿ ದಿನಾಂಕ:25.05.2008 ರಂದು ಮಧ್ಯಾಹ್ನ 4.00 ಗಂಟೆಗೆ ಅಥವಾ ಅನುಕೂಲವಾದ ದಿನಾಂಕದಂದು ತೆರೆಯಲಾಗುವುದು. ತಾಂತ್ರಿಕ ಬಿಡ್ಡಿನಲ್ಲಿ ಅರ್ಹತೆ ಹೊಂದಿರುವವರ ಹೆಸರಿನ

ಪಟ್ಟಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಛೇರಿ ನೋಟೀಸ್ ಫಲಕದಲ್ಲಿ ಪ್ರಕಟಿಸಲಾಗುವುದು. ಕೇವಲ ತಾಂತ್ರಿಕ ಬಿಡ್ಡಿನಲ್ಲಿ ಅರ್ಹತೆ ಹೊಂದಿದವರ ಆರ್ಥಿಕ ಬಿಡ್ಡನ್ನು ಮಾತ್ರ ತೆರೆದು ತುಲನೆ ಮಾಡಲಾಗುವುದು.

ತಾಂತ್ರಿಕ ಬಿಡ್ ಭಾಗ – 1

ಗುತ್ತಿಗೆದಾರರು ತಮ್ಮ ತಾಂತ್ರಿಕ ಬಿಡ್ ಸಾಮರ್ಥ್ಯಕ್ಕೆ ಅನುಗುಣವಾಗಿ ಈ ಕೆಳಕಾಣಿಸಿರುವ ನಿಬಂಧನೆಗಳಿಗೆ ಅರ್ಹತೆ ಹೊಂದುವವರು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

1. ವೈಯಕ್ತಿಕ ಫರ್ಮ್/ಸಂಯುಕ್ತ ಎರಡು ಅಥವಾ ಹೆಚ್ಚಿನ ಗುತ್ತಿಗೆದಾರರು ಪ್ರತಿಯೊಬ್ಬರು ಕೆಳಗಿನ ವಿವರ ಹೊಂದಿರಬೇಕು.

2008–09ನೇ ಅರ್ಥಿಕ ಸಾಲಿನ ಹಿಂದಿನಿಂದ 5 ವರ್ಷಗಳ ವಹಿವಾಟಿನಲ್ಲಿ (2003–04 ರಿಂದ 2008–09);

I. ಕನಿಷ್ಠ ಎರಡು ಬೇರೆ ಆರ್ಥಿಕ ವರ್ಷದಲ್ಲಿ 250 ಲಕ್ಷಗಳು ಕಡಿಮೆಯಿಲ್ಲದಂತೆ (ಎಲ್ಲಾ ಸಿವಿಲ್ ಕಾಮಗಾರಿಗಳಿಗೆ ಮಾತ್ರ) ವಾರ್ಷಿಕ ವಹಿವಾಟು ಮಾಡಿರಬೇಕು. ಕಳೆದ 5 ವರ್ಷಗಳಲ್ಲಿ ಮಾಡಿರುವ ಆರ್ಥಿಕ ವಹಿವಾಟಿಗೆ, 2008–09ನೇ ಸಾಲಿಗೆ ಹೋಲಿಸಿದಂತೆ ಪ್ರತಿ ಸಾಲಿಗೆ ಶೇಕಡಾ 10ರ ವೈಟೇಜ್ ಪರಿಗಣಿಸಲಾಗುವುದು.

II. ಪ್ರಮುಖ ಗುತ್ತಿಗೆದಾರರೆಂದು ಕನಿಷ್ಠ ಇಂತಹದೆ ಒಂದು ಕಾಮಗಾರಿ 135.00 ಲಕ್ಷಗಳಿಗೆ ಕಡಿಮೆಯಿಲ್ಲದಂತೆ ತೃಪ್ತಿಕರವಾಗಿ ಕೆಲಸ ನಿರ್ವಹಿಸಿರಬೇಕು ಪ್ರಮುಖ ಗುತ್ತಿಗೆದಾರರೆಂದರೆ ಕಾಮಗಾರಿಯನ್ನು ಸ್ವತ: ನಿರ್ಮಿಸಿ ಸ್ವಂತ ಅವರ ಹೆಸರಿನಲ್ಲಿ ಬಿಲ್ಲನ್ನು ಪಡೆದಿರತಕ್ಕದ್ದು.

III. ಯಾವುದೇ ಒಂದು ವರ್ಷದಲ್ಲಿ ಈ ಕೆಳಕಾಣಿಸಿದ ಕನಿಷ್ಠ ಪರಿಮಾಣದ ಕೆಲಸಗಳನ್ನು ಮಾಡಿರಬೇಕು.

(ಅ) ಅಗೆತದ ಕೆಲಸ (ಎಲ್ಲಾ ಸ್ಥರಗಳು ಸೇರಿದಂತೆ)	:3200.00ಘಮೀ.
(ಬ) ಕಾಂಕ್ರೀಟ್ ಕೆಲಸ	:2600.00 ಘಮೀ.
(ಕ) ಎಂ.ಎಸ್.ಗೇಟ್	:13000.00 ಕೆ.ಜಿ

2) ಅರ್ಜಿದಾರರು ಕೆಳಕಂಡ ಸಾಮರ್ಥ್ಯವನ್ನು ಪ್ರದರ್ಶಿಸುವುದು.

ಅ) ಈ ಯೋಜನೆಗೆ 5 ವರ್ಷಗಳ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಯ ಇಂತಹದೆ ಅನುಭವವುಳ್ಳ ಒಬ್ಬ ಮ್ಯಾನೇಜರ್ ಹಾಗೂ ಸಾಕಷ್ಟು ಅನುಭವವುಳ್ಳ ಈ ತರಹದ ಕೆಲಸ ಮಾಡಿರುವ ಪರಿಣತರನ್ನು ಹೊಂದಿರಬೇಕು. (ಬಿ.ಇ., ಪದವೀಧರರಿರಬೇಕು)

ಆ) ಈ ಕಾಮಗಾರಿಗೆ ಬೇಕಾದ ಸಂಪನ್ಮೂಲ ಚರಾಸ್ಥಿ ಅಥವಾ ಹಣರೂಪದಲ್ಲಿ ಕನಿಷ್ಠ ರೂ. ಕ್ರಮ 37.50,ಲಕ್ಷಗಳ ಬಗ್ಗೆ ಪ್ರಮಾಣ ಪತ್ರ ಕ್ರೆಡಿಟ್ ಲೈನ್ಸ್/ಅನುದಾನ ಪ್ರಮಾಣ ಪತ್ರ ಬ್ಯಾಂಕಿನಿಂದ ಪ್ರಮಾಣೀಕರಿಸಿದ್ದು

(ಇ) ಗುತ್ತಿಗೆದಾರರು ಈ ಕೆಳ ಕಾಣಿಸಿದ ಯಂತ್ರೋಪಕರಣಗಳನ್ನು ಸ್ವಂತ ಅಥವಾ ಲೀಸ್ ಮೇಲೆ ಹೊಂದಿರತಕ್ಕದ್ದು.

ಅ) ಎಕ್ಸ್‌ಕವೇಟರ್/ಪೊಕ್ಲೇನ್ (0.9 ಘ.ಮೀ.ಸಾಮರ್ಥ್ಯ)	:	1 ಸಂಖ್ಯೆ
ಆ) ಲಾರಿಗಳು / ಟಿಪ್ಪರ್‌ಗಳು	:	2 ಸಂಖ್ಯೆ
ಇ) ಕಾಂಕ್ರೀಟ್ ಮೆಷಿನ್ ಮಿಕ್ಸರ್ (10/7 ಘ.ಅಡಿ ಸಾಮರ್ಥ್ಯ)	:	2 ಸಂಖ್ಯೆ
ಈ) ವೈಬ್ರೇಟರ್	:	4 ಸಂಖ್ಯೆ
ಉ) ಪಂಪ್‌ಸೆಟ್ (8 ಹೆಚ್.ಪಿ ಯಿಂದ 20 ಹೆಚ್.ಪಿ)	:	2 ಸಂಖ್ಯೆ
ಊ) ಕ್ರೇನ್/ಚೈನ್ ಪುಲ್ಲಿ (2 ಟನ್ ಸಾಮರ್ಥ್ಯ)	:	1 ಸಂಖ್ಯೆ

3) ಗುತ್ತಿಗೆದಾರರು ಕಾಮಗಾರಿಗೆ ಬೇಕಾಗುವ ಐ.ಎಸ್.ಗುಣಮಟ್ಟವುಳ್ಳ ಸ್ಟೀಲ್, ಸಿಮೆಂಟನ್ನು ತಮ್ಮ ಸ್ವಂತ ಖರ್ಚಿನಲ್ಲಿ ಪೂರೈಸಿಕೊಳ್ಳತಕ್ಕದ್ದು.

4) ತಾಂತ್ರಿಕ ಬಿಡ್ಡಿನ ಅರ್ಹತೆಗಾಗಿ ಸಲ್ಲಿಸಿರುವ ದಸ್ತಾವೇಜುಗಳ ಪ್ರಾಮಾಣಿಕತೆ ಮತ್ತು ಸತ್ಯಾಸತ್ಯತೆಗಳನ್ನು ಖಚಿತಗೊಳಿಸಲು ಅವುಗಳ ಮೇಲೆ ಗುತ್ತಿಗೆದಾರರು ದೃಢೀಕರಿಸಿ ಸಹಿ ಮಾಡತಕ್ಕದ್ದು. ದಸ್ತಾವೇಜುಗಳ ಮೇಲೆ ಗುತ್ತಿಗೆದಾರರಿಂದ ದೃಢೀಕರಿಸಿ ಸಹಿ ಮಾಡದಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ತಾಂತ್ರಿಕ ಮೌಲ್ಯ ಮಾಪನ ಮಾಡಲು ಪರಿಗಣಿಸಲಾಗುವುದಿಲ್ಲ. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ಮುಂದೆ ತಿಳಿಸಲಾಗುವ ನಿಗದಿತ ದಿನಾಂಕ ಮತ್ತು ಸಮಯದಂದು ತೆರೆಯಲಾಗುವುದು.

5) ಗುತ್ತಿಗೆದಾರರು ಕಾಮಗಾರಿ ನಿರ್ವಹಿಸುವ ಬಗ್ಗೆ ಅವಶ್ಯಕ ಮಾನವ ಶಕ್ತಿ ಹೊಂದಿರಬೇಕು.

6) ಅಂಚೆ/ಕೊರಿಯರ್ ಮೂಲಕ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಿದ್ದಲ್ಲಿ, ತಡವಾಗಿ ತಲುಪಿದ್ದಲ್ಲಿ ಸಣ್ಣ ನೀರಾವರಿ ಇಲಾಖೆ ಅಂಚೆ ವಿಳಂಬಕ್ಕೆ ಹೊಣೆಗಾರರಾಗುವುದಿಲ್ಲ.

7) ಮೇಲೆ ತಿಳಿಸಿರುವ ದಿನಾಂಕಗಳಂದು ಸರ್ಕಾರಿ ರಜೆ ಇದ್ದಲ್ಲಿ ಮುಂದಿನ ದಿನಾಂಕವನ್ನು ಕೆಲಸದ ದಿನಾಂಕವೆಂದು ಪರಿಗಣಿಸುವುದು.

8) ಟೆಂಡರ್ ಸ್ವೀಕರಿಸುವ ಸಕ್ಷಮ ಅಧಿಕಾರಿಗಳು ಯಾವುದೇ ಟೆಂಡರ್ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಾರಣವನ್ನು ನೀಡದೆ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.
9) ಏನಾದರೂ ತಿದ್ದುಪಡಿಗಳಿದ್ದರೆ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಬೆಂಗಳೂರು ಇವರ ಕಛೇರಿಯ ನೋಟೀಸ್ ಫಲಕದಲ್ಲಿ ಪ್ರಕಟಿಸಲಾಗುವುದು.
10) ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸುವ ಮೊದಲು ಕಾಮಗಾರಿ ಸ್ಥಳವನ್ನು ಪರಿವೀಕ್ಷಣೆ ಮಾಡಿ ಭಾಗ ವಹಿಸುವುದು. ನಂತರ ಕಾಮಗಾರಿಯ ಸ್ಥಳದ ಬಗ್ಗೆ ಯಾವುದೇ ತಂಟೆ ತಕರಾರುಗಳಿಗೆ ಇಲಾಖೆಯು ಜವಾಬ್ದಾರವಾಗುವುದಿಲ್ಲ.
11) ಟೆಂಡರ್ ಡಾಕ್ಯೂಮೆಂಟಿನ ಭಾಗ– 2ರ ಸೆಕ್ಷನ್ – 1 ರಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಷರತ್ತು ಅಥವಾ ಇನ್ನಾವುದೇ ಬದಲಾವಣೆ ಮಾಡಿದ್ದಲ್ಲಿ ಅಂತಹ ಟೆಂಡರುಗಳು ತಿರಸ್ಕರಿಸಲಾಗುವುದು.
12) ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
13) ಎಲ್ಲಾ ಲಕೋಟೆಗಳ ಮೇಲೆ ಕೆಲಸದ ಹೆಸರನ್ನು ಸ್ಪಷ್ಟವಾಗಿ ಬರೆಯಬೇಕು ಹಾಗೂ ಲಕೋಟೆ – 1 (ತಾಂತ್ರಿಕ ಬಿಡ್) ಹಾಗೂ ಲಕೋಟೆ – 2 (ಆರ್ಥಿಕ ಬಿಡ್) ಎಂದು ಸ್ಪಷ್ಟವಾಗಿ ನಮೂದಿಸಬೇಕು. ಎರಡೂ ಲಕೋಟೆಗಳನ್ನು ಸೇರಿಸಿ ಒಂದು ದೊಡ್ಡ ಲಕೋಟೆಯಲ್ಲಿ ಸೀಲ್ ಮಾಡಿ, ಕೆಲಸದ ಹೆಸರನ್ನು ಬರೆದು ಟೆಂಡರ್ ಸಲ್ಲಿಸುವುದು.
14) ಕೆಲಸಕ್ಕೆ ಬೇಕಾಗುವ ಭೂಮಿ (ಭಾಗಶ: ಅಥವಾ ಪೂರ್ತಿ) ಸಣ್ಣ ನೀರಾವರಿ ಇಲಾಖೆಯ ಅಧೀನಕ್ಕೆ ಸಾಧ್ಯತೆಯಾಗದಿದ್ದಲ್ಲಿ ಗುತ್ತಿಗೆದಾರರು ಸ್ವತ: ಸಂಧಾನದ ಮೂಲಕ ಸದರಿ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಾಮಗಾರಿ ಪೂರ್ಣಗೊಳಿಸಬೇಕು. ಭೂಸ್ವಾಧೀನತೆ ಸಂಧಾನತೆಯಿಂದ ಸಣ್ಣ ನೀರಾವರಿ ಇಲಾಖೆಗೆ ಯಾವುದೇ ಹೆಚ್ಚು ಆರ್ಥಿಕ ಹೊರೆ ಅಥವಾ ಕ್ಲೇಮುಗಳನ್ನು ಗುತ್ತಿಗೆದಾರರು ಕೇಳುವಂತಿಲ್ಲ.

ಎನ್. ಸಿದ್ದರಾಜು

ಪಿ.ಆರ್. 246

ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ವಿಭಾಗ, ಬೆಂಗಳೂರು.

INFRASTRUCTURE DEVELOPMENT DEPARTMENT

STATE TENDER BULLETIN

No. IDD 14 DIA 07, Dated: 28th March 2008

Following Tender Notice is hereby published as a part of State Tender Bulletin for the Month of March 5th Week 2008.

Tender Notification for the work: Development of Bijapur Airport in Karnataka on Public Private Partnership (PPP) Basis.

The details of the Tender may be obtained from the Managing Director, IDeCK, No.39, 5th Cross, 8th Main, RMV Extn., Sadashivanagar, Bangalore - 560 080.

T.B. RENUKA PRASAD

Deputy Secretary to Government & Tender Bulletin Officer,
Infrastructure Development Department,
Vikasa Soudha, Bangalore - 560 001.

Request for Proposal

for

Development of an Airport at Bijapur, Karnataka

Bijapur, the headquarters of Bijapur District in Karnataka is a major tourist destination attracting a large number of domestic as well as international tourists every year. For providing easy access to this tourism centre and to promote overall development in the North Karnataka region, Government of Karnataka (GoK) has decided to develop an airport in Bijapur.

Government of Karnataka (GoK) invites proposals from interested parties for development and subsequent operation and maintenance of the Greenfield airport at Bijapur under an appropriate private public partnership framework.

The Request for Proposal (RFP) document may be purchased from the office of the Project Advisor at the address mentioned below.

Cost of RFP: Rs.10,000/- in the form of demand draft from a scheduled bank in favour of Infrastructure Development Corporation (Karnataka) Limited payable at Bangalore.

Submission of Proposals : On or before May 29, 2008 upto 16.30 Hrs at the address of the Project Advisor mentioned below. Proposals shall be submitted along with a Bid Security of Rs.5,00,000/- (Rupees Five Lakhs) in the form stipulated in the RFP.

Opening of Proposals : May 30, 2008 at 11.00 Hrs.

All subsequent notifications, changes and amendments would be posted on www.idd.kar.nic.in

Project Sponsor
Principal Secretary to Government
Infrastructure Development Department (IDD)
Government of Karnataka
Vikasa Soudha, Bangalore
Ph : 080-22282366 Fax : 080-22280605
www.idd.kar.nic.in

Project Advisor
iDeCK
Sushma Nirmal
(Infrastructure Development Corporation (Karnataka) Limited)
Infra House, # 39, 5th Cross, 8th Main, Sadashivanagar, Bangalore - 560 080
Ph : 080-23613014/15 Fax : 080-23613016
www.idd.kar.nic.in

T.B. RENUKA PRASAD
Deputy Secretary to Government & Tender Bulletin Officer,
Infrastructure Development Department,
Vikasa Soudha, Bangalore - 560 001.

P.R. 245

DEPARTMENT OF ANIMAL HUSBANDRY & FISHERIES
STATE TENDER BULLETIN
No. AHF 5 AID 2008, Dated: 25th April 2008

The following tender notification/office order are to be published as part of the State Tender Bulletin for the fourth week of April 2008.

Tender Notification/Office Order Number:

1. ಆಪಸಂ/ಕುಕ್ಕುಟ/ಸಿಎಎಸ್/ಟೆಂಡರ್/2007–08 dated: 10.04.2008
2. CAH/DVD/1/RE-TENDER/12/2007-08 dated: 19.04.2008

SIDDALINGAIAH
Deputy Secretary to Government,
Animal Husbandry & Fisheries Department
(State Tender Bulletin Officer)
IV Floor, Vikasa Soudha, Bangalore-01.

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು – 560 001
ಟೆಂಡರ್ ನೋಟಿಫಿಕೇಷನ್
ಸಂ.ಆಪಸಂ/ಡಿವಿಡಿ/1/ರೀ–ಟೆಂಡರ್/12/2007–08, ದಿನಾಂಕ:19ನೇ ಏಪ್ರಿಲ್ 2008

ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯು 2008–09ನೇ ಸಾಲಿಗೆ ರಾಜ್ಯದ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಉಪಯೋಗಿಸಲು ಬೇಕಾದ ಔಷಧಗಳು, ರಾಸಾಯನಿಕಗಳು ಮತ್ತು ಉಪಕರಣಗಳು ಇತ್ಯಾದಿಗಳನ್ನು ರೀ – ಟೆಂಡರ್ ಮೂಲಕ ಖರೀದಿಸಲು ಉದ್ದೇಶಿಸಿದೆ. ಇವುಗಳನ್ನು ಸರಬರಾಜು ಮಾಡಲು ಇಲಾಖೆಯಲ್ಲಿ ನೊಂದಾಯಿತ, ಅರ್ಹ ಟೆಂಡರ್‌ದಾರರುಗಳಿಂದ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಂದ ಮೊಹರು ಮಾಡಿದ ಟೆಂಡರ್ ಅರ್ಜಿಗಳನ್ನು ಎರಡು ವರ್ಷಗಳ ಅವಧಿಗೆ ಆಹ್ವಾನಿಸಿದೆ.

ಆಸಕ್ತಿಯುಳ್ಳ ನೊಂದಾಯಿತ, ಅರ್ಹ ಟೆಂಡರ್‌ದಾರರು ಹೆಚ್ಚುವರಿ ಮಾಹಿತಿಯನ್ನು ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ಹೆಬ್ಬಾಳ, ಬೆಂಗಳೂರು–560 024 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಅರ್ಹ ಟೆಂಡರ್‌ದಾರರು ತಮ್ಮ ಹೆಸರುಗಳನ್ನು ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ರಾಜ್ಯ ವೀರ್ಯ ಸಂಕಲನಾ ಕೇಂದ್ರದ ಆವರಣ, ಹೆಬ್ಬಾಳ, ಬೆಂಗಳೂರು–560 024 ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ 100/– ರೂ.ಗಳ ಡಿಮ್ಯಾಂಡ್ ಡ್ರಾಫ್ಟ್/ಪೇಆರ್ಡರ್ ಅನ್ನು ಮೇಲ್ಕಂಡ ಅಧಿಕಾರಿಗಳ ಹೆಸರಿನಲ್ಲಿ ಪಡೆದು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳಬಹುದು.

ಆಸಕ್ತಿಯುಳ್ಳ, ನೊಂದಾಯಿತ ಅರ್ಹ ಟೆಂಡರ್‌ದಾರರು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ರೂ. 1778/– + (12.5%) ವ್ಯಾಟ ರೂ.222/–ಗಳ ಎರಡು ಪ್ರತ್ಯೇಕ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು /ಪೇಆರ್ಡರ್ ಅನ್ನು ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಔಷಧಿ ಭಂಡಾರ, ರಾಜ್ಯ ವೀರ್ಯ ಸಂಕಲನಾ ಕೇಂದ್ರದ ಆವರಣ, ಹೆಬ್ಬಾಳ, ಬೆಂಗಳೂರು–

560 024 ರವರ ಹೆಸರಿನಲ್ಲಿ ಪಡೆದು, ಸದರಿ ಅಧಿಕಾರಿಗೆ ಲಿಖಿತ ಅರ್ಜಿ ನೀಡುವ ಮೂಲಕ ದಿನಾಂಕ: 26–04–2008 ರಿಂದ 09–06–2008 ಕಡೆಯ ದಿನಾಂಕ 5.30 ಘಂಟೆಯವರೆಗೆ ಒಂದು ಪೂರ್ಣ ಟೆಂಡರ್ ಡಾಕ್ಯುಮೆಂಟ್ ಸೆಟ್‌ನ ಮೂಲ ಮತ್ತು ಪ್ರತಿಯನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟೆಂಡರ್ ಡಾಕ್ಯುಮೆಂಟನ್ನು ಅಂಚೆಯ ಮೂಲಕ ಪಡೆಯಲು ಬಯಸುವವರು ಹೆಚ್ಚುವರಿ 300/– ರೂ. ಗಳನ್ನು ಒಂದು ಸೆಟ್ ಟೆಂಡರ್ ಡಾಕ್ಯುಮೆಂಟ್‌ಗೆ ಪಾವತಿ ಮಾಡಿದವರಿಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸಲಾಗುವುದು. ಅಂಚೆ ಮೂಲಕ ಕಳುಹಿಸಿದ ಟೆಂಡರ್ ಡಾಕ್ಯುಮೆಂಟ್‌ಗಳು ನಿಗಧಿತ ವೇಳೆಗೆ ತಲುಪದಿದ್ದಲ್ಲಿ / ದಿದ್ದರೆ, ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು ಇವರು ಹೊಣೆಗಾರರಲ್ಲ. ಟೆಂಡರ್‌ದಾರರು ಯಾವುದಾದರೂ ಒಂದು ಅಥವಾ ಎಲ್ಲಾ "ಔಷಧ ಮತ್ತು ರಾಸಾಯನಿಕಗಳು" ಮತ್ತು "ಉಪಕರಣ"ಗಳು ಇತ್ಯಾದಿಗಳಿಗೆ ದರಗಳನ್ನು ನೀಡಬಹುದು. (ವಿವರಗಳಿಗೆ ಟೆಂಡರ್ ಡಾಕ್ಯುಮೆಂಟ್‌ನ V ಮತ್ತು V(a) ಪರಿಚ್ಛೇದಗಳನ್ನು ನೋಡಬಹುದು). ಮೌಲ್ಯ ನಿರ್ಧಾರವು ಪ್ರತ್ಯೇಕವಾಗಿ ಆಯಾ ರಖಂಗಳ ಮೇಲೆ ಮಾಡಲಾಗುತ್ತದೆ.

ಎಲ್ಲಾ ಟೆಂಡರ್‌ಗಳ ಅವಶ್ಯಕತೆಯಿರುವ ಇ.ಎಂ.ಡಿ. ಮತ್ತು ಡಾಕ್ಯುಮೆಂಟ್ಸ್ ಹಾಗೂ ಪ್ರಮಾಣ ಪತ್ರಗಳೊಂದಿಗೆ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, 3ನೇ ಮಹಡಿ, ಸರ್.ಎಂ. ವಿಶ್ವೇಶ್ವರಾಯ ಚಿಕ್ಕಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560 001 ಇವರಿಗೆ ದಿನಾಂಕ: 10–06–2008 ರಂದು ಸಂಜೆ 5.30 ಘಂಟೆಯೊಳಗೆ ಸಲ್ಲಿಸಬೇಕು.

ಟೆಂಡರ್‌ದಾರರ ಅಥವಾ ಟೆಂಡರ್‌ದಾರರಿಂದ ನಾಮ ನಿರ್ದೇಶನ ಹೊಂದಿದವರ ಸಮ್ಮುಖದಲ್ಲಿ ದಿನಾಂಕ: 11.06.2008 ರಂದು 11 ಘಂಟೆಯ ತರುವಾಯ ಆಯುಕ್ತರವರ ಕಾರ್ಯಾಲಯ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಸರ್.ಎಂ. ವಿಶ್ವೇಶ್ವರಾಯ ಚಿಕ್ಕಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560 001 ಇಲ್ಲಿ ಸಲ್ಲಿಸಿದ ಟೆಂಡರ್‌ಗಳನ್ನು ತೆರೆಯಲಾಗುವುದು.

ಅಪರ ನಿರ್ದೇಶಕರು (ಜಾನುವಾರು ಆರೋಗ್ಯ)
ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಅಧ್ಯಕ್ಷರು
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಬೆಂಗಳೂರು–560001.

ಪಿ.ಆರ್. 253

URBAN DEVELOPMENT AUTHORITY, GULBARGA
TIME EXTENSION NOTIFICATION (8th)
No. GDA/Tech/M.S.K-C/Complex/2007-08/145/4, Dated: 10th April 2008

This Office invited sealed item Rate (Two covers) tender for construction of shopping Complex in MSK Mill Development Scheme (Sy. No. 110 Part of Brahmapur) under Notification No.GDA/TECH/ M.S.K-C/Complex/2007-08/3831 dated 21.03.2007 which was published in Sanyukta Karnataka and The Hindu Daily Papers on 30th march & 31st March 2007 respectively. The same was extended vide notification No.364 dated 18.05.2007 the same was published in Sanyukta Karnataka and the New Indian Express dated 25.05.2007 and 2nd time extension made vide notification No. 620 dated 18.06.2007. The 3rd time extension made on 18.07.2007 vide No.748. 4th time extension made on 10.09.2007 vide No. 1229, 5th time extension made on 31.10.2007 vide No. 1584, 6th time extension made on 31.12.2007 vide No. 1910. and 7th time extension made on 07.02.2008 vide No. 3183. Due to declaration of election and some technical reasons, the last date for receipt of application, issue of tender documents & receipt of tender documents extended as under.

1.	Amount put to tender	:	Rs. 911.50 lakhs
2.	E.M.D. (Through Sy Bank Challan/DD)	:	Rs. 9.12 Lakhs
3.	Cost of tender documents (Non refudable) (Through Sy Bank Challan/DD)	:	Rs. 18,500/-
4.	Last for receipt of application	:	28.06.2008 up to 5.30 pm
5.	Last date of issue of Blank Tender documents (Technical & Financial)	:	05.07.2008 up to 5.30 pm
6.	Last date of Receipt of Sealed Tender documents (Technical & Financial)	:	14.07.2008 up to 4.00 pm
7.	Date of Opening of Technical Bid	:	15.07.2008 @ 11.00 am

The remaining terms and conditions will be same

Commissioner
Urban Development Authority
Gulbarga.

P.D. 42